ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಬಾಗೇಪಲ್ಲಿ

C.C. 264/2020 CW: 2 P.W. 2

| | |
|---|---|
| ಸಾಕ್ಷಿದಾರರ ಹೆಸರು | ಃ ರೆಡ್ಡಮ್ಮ |
| ತಂದೆ/ಗಂಡನ ಹೆಸರು | ಃ ನಾರಾಯಣಪ್ಪ |
| ವಯಸ್ಸು | ಃ 60 ವರ್ಷ |
| ವೃತ್ತಿ | ಃ ವ್ಯವಸಾಯ |
| ವಾಸಸ್ಥಳ | ಃ ಇದ್ದಿಲವಾರಪಲ್ಲಿ |

**ಪ್ರಮಾಣೀಕರಿಸಲಾದ ದಿಃ 29.12.2023**

**ಮುಖ್ಯ ವಿಚಾರಣೆ ಃಃ ಸಸಅ ರವರಿಂದಃ**

ಆರೋಪಿಗಳು ಗೊತ್ತು. ಆರೋಪಿಗಳ ಹೊಲ ನನ್ನ ಜಮೀನಿನ ಬಳಿ ಇದೆ. ನನ್ನ ಜಮೀನಿನ ಸ. ನಂ. 19/20 ಬೆಲ್ಲಾಲಂಪಲ್ಲಿ ಇದೆ. ಅದರ ವಿಸ್ತೀರ್ಣ 2 ಎಕರೆ ಇದೆ. 4 ವರ್ಷಗಳ ಹಿಂದೆ ಜಮೀನಿನಲ್ಲಿ ಗಿಡಗಳನ್ನು ಕಿತ್ತು ಹಾಕುತ್ತಿದ್ದೆ. ಅಲ್ಲಿ ಆರೋಪಿಗಳು ಬಂದು ಸಂಜೆ 5.30 ರ ಸಮಯದಲ್ಲಿ ಬಂದು, ಅವ್ಯಾಚ್ಯ ಶಬ್ದಗಳಿಂದ ಬೈದು, 1 ನೆ ಆರೋಪಿಯು ಮಚ್ಚಿನಿಂದ ನನ್ನ ಎಡ ಕಾಲು ಮತ್ತು ಎಡಗೈ ಹೊಡೆದಿರುತ್ತಾರೆ.

2. 3 ನೇ ಆರೋಪಿ ನನ್ನ ಜುಟ್ಟನ್ನು ಹಿಡಿದುಕೊಂಡು ಎಳೆದಾಡಿ, 2 ನೇ ಆರೋಪಿ ಅವ್ಯಾಚ್ಯ ಶಬ್ದಗಳಿಂದ ಬೈದು ನಿಂದಿಸಿರುತ್ತಾರೆ. ನಂತರ ನನ್ನನ್ನು ಎಲ್ಲಿಗೆ ಕರೆದುಕೊಂಡು ಹೋದರು ಎಂದು ಜ್ಞಾಪಕ ಇಲ್ಲಿ. ಏಕೆಂದರೆ ಆಗ ನನಗೆ ಪ್ರಜ್ಞೆ ಇರಲಿಲ್ಲ. ಮಚ್ಚನ್ನು ಸಾಕ್ಷಿ ಗುರುತಿಸಿದ್ದು, ಅದನ್ನು ಈಗಾಗಲೇ ಎಮ್. ಒ 1 ಎಂದು ಗುರುತಿಸಲಾಯಿತು. ಈ ದಿನ 3 ನೇ ಆರೂಪಿ ಹಾಜರಿರುತ್ತಾರೆ. ಇತರೆ ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ** ಃ– ಆರ್. ಜೆ ರವರಿಂದ

ಆರೋಪಿಗಳು ಮತ್ತು ನನ್ನ ನಡುವೆ ಜಮೀನಿಗೆ ಸಂಬಂಧಿಸಿದಂತೆ ಈ ನ್ಯಾ. ದಲ್ಲಿ ದಾವೆ ನಡೆಯುತ್ತಿದೆ ಎಂದರೆ ಸರಿ. ಜಮೀನು ವಿಷಯಕ್ಕೆ ಸಂಬಂಧಿಸಿದಂತೆ ಆರೋಪಿಗಳು ಮತ್ತು ನನ್ನ ನಡುವೆ ವೈ ಮನಸ್ಸು ಇದೆ ಎಂದರೆ ಸರಿ. ಜಮೀನು ವಿವಾದಕ್ಕೆ ಸಂಬಂಧಿಸಿದಂತೆ ರಾಜಿ ಪಂಚಾಯಿತಿಗಳು ನಡೆದವು ಎಂದರೆ ಸರಿ. ಸದರಿ ಜಮೀನಿನ ಬಳಿ ಉ– ಒಂದು ಸೀಟಿನ ಮನೆ ಇದೆ ಎಂದರೆ ಸರಿ.

2. ಮನೆ ಬಳಿ ಜನ ಇರುತ್ತಾರೆ ಎಂದರೆ ಆ ದಿನ ಇರಲಿಲ್ಲ. ಸದರಿ ಜಮೀನಿನ ಪಕ್ಕ ಚಾಸಾ 4 ಮತ್ತು 5 ರವರ ಜಮೀನು ಇದೆ ಎಂದರೆ ಸರಿ. ಚಾಸಾ 4 ಮತ್ತು 5 ರವರು ಅಲ್ಲಿ ಯಾವಾಗಲೂ ಕೆಲಸ ಮಾಡಿಕೊಂಡು ಇರುತ್ತಾರೆ ಎಂದರೆ ಆ ದಿನ ಇರಲಿಲ್ಲ. ಚೇಳೂರಿನಲ್ಲಿ ಆಸ್ಪತ್ರೆ ಇದೆ ಎಂದರೆ ಸರಿ. ಪಾತಪಳ್ಯ ದಲ್ಲೂ ಕೂಡ ಸ. ಆಸ್ಪತ್ರೆ ಇದೆ ಎಂದರೆ ಸರಿ.

3. ನಾನು ಆಸ್ಪತ್ರೆಯಲ್ಲಿ 2 ದಿನ ಇದ್ದೆ. ಚಾಸಾ 1 ರವರು ಬೆಂಗಳೂರಿಗೆ ಆಸ್ಪತ್ರೆಗೆ ಹೋಗಿಲ್ಲ. ಶ್ರೀನಿವಾಸ ರವರು ನನ್ನನ್ನು ಬೆಂಗಳೂರಿಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ.

4. ಆ ದಿನ ಯಾವುದೇ ಗಲಾಟೆ ನಡೆದಿಲ್ಲ ಎಂದರೆ ಸರಿಯಲ್ಲ. ಮು. ಮಾಲಿನ ರೀತಿಯ ಮಚ್ಚು ಗಳು ಬೇರೆ ಕಡೆ ಸಿಗುತ್ತವೆ ಎಂದರೆ ಸರಿ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳ ಅವ್ಯಾಚ್ಯ ಶಬ್ದಗಳಿಂದ ಬೈದು, ಹಲ್ಲೆ ಮಾಡಿ ಜೀವ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಬೆಂಗಳೂರಿನ ಆಸ್ಪತ್ರೆಯಲ್ಲಿ ನನ್ನ ಮಗ ಶ್ರೀನಿವಾಸ ಮತ್ತು ಚಾಸಾ 1 10 ದಿನಗಳ ಕಾಲ ಇದ್ದರು. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇರುವುದಿಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಗಣಕೀಕರಣಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಜೆಎಂಎಫ್‌ಸಿ ., ಬಾಗೇಪಲ್ಲಿ